# ಸಾಂಕ್ರಾಮಿಕದ ಕಾಲದಲ್ಲಿ ಪೌರತ್ವ

ಪ್ರಣೀತ್ ಗುಡ್ಲದನ ಮತ್ತು ಸಂಕಲ್ಪ್ ಕೋರಿಪಲ್ಲಿ

**ಅವರು (ಇಬ್ಬರು ವಿದ್ಯಾರ್ಥಿಗಳು) ನೀಡಿ ಮೌಲ್ಯಯುತ ಹಾಗು ಗಮನಾರ್ಹ ಕೊಡುಗೆಗಳಿಂದ ಹೊಸಕೋಟೆಯ ಬಡಜನರಿಗೆ ಬಹಳಷ್ಟು ಉಪಯೋಗವಾಗಲಿದೆ.**

**– ಚಂದನ್, ಗೂಂಜ್ ಸಂಯೋಜಕ**

ನಾಗರಿಕರಾಗಿ ತಮ್ಮ ಜವಾಬ್ದಾರಿಯನ್ನು ನೆರವೇರಿಸಲು ವ್ಯಕ್ತಿಗಳು ಏನು ಮಾಡಬೇಕು? ದೇಶದ ಕಾನೂನು ಹಾಗು ನಿಯಮಗಳನ್ನು ಅನುಸರಿಸುವುದಲ್ಲದೆ, ನಾಗರಿಕರು ಬೇರೆಯವರ ಅಗತ್ಯಗಳನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಗೌರವಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ. ಸ್ವಯಂ ಸೇವಾ ಪ್ರವೃತ್ತಿಯು ಸಾಮಾಜಿಕವಾಗಿ ಉಪಯುಕ್ತ ಕಾರ್ಯವಾಗಿದ್ದು, ಸಮುದಾಯಗಳನ್ನು ಬಲಪಡಿಸುತ್ತದೆ ಹಾಗು ನಾಗರಿಕತ್ವದ ಮುಖ್ಯ ನೀತಿಯೊಂದನ್ನು ಪೂರೈಸುತ್ತದೆ.

ಜನರು ಪ್ರಜಾಪ್ರಭುತ್ವದ ನಿರ್ಮಾಣ ಘಟಕಗಳು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು 'ನಾಗರಿಕತ್ವವು ದೇಶದ ಸೇವೆಯನ್ನು ಒಳಗೊಂಡಿರುತ್ತದೆ' ಎಂದು ಹೇಳಿದ್ದರು. 1997ರಲ್ಲಿ ಬ್ರಿಟನ್‌ನಲ್ಲಿ ಅಧಿಕಾರಕ್ಕೆ ಬಂದ ಲೇಬರ್ ಸರ್ಕಾರವು ಸಾರ್ವಜನಿಕ ಸೇವೆಗಳನ್ನು ಬಳಸುವ ಸಂತೃಪ್ತ ಬಳಕೆದಾರರಾದ ನಾಗರಿಕರನ್ನು ಸಮುದಾಯದ ಇನ್ನಷ್ಟು ಕ್ರಿಯಾಶೀಲ ಹಾಗು ಸಕ್ರಿಯ ಸದಸ್ಯರನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿತ್ತು. ನಾಗರಿಕತ್ವದ ಈ ವ್ಯಾಖ್ಯಾನವು ಸಮುದಾಯಕ್ಕೆ, ಅದಕ್ಕಿಂತ ಮುಖ್ಯವಾಗಿ, ಒಟ್ಟಾರೆ ದೇಶಕ್ಕೆ ಉಪಯುಕ್ತವಾಗಲಿದೆ.

ಇತ್ತೀಚಿನ ತಿಂಗಳುಗಳಲ್ಲಿ ಸಮಾಜದ ಕೆಲವು ವರ್ಗಗಳ ಮೇಲಿನ ಸಾಂಕ್ರಾಮಿಕ ರೋಗದ ತೀವ್ರ ಪರಿಣಾಮ ನಮ್ಮ ಕಣ್ಣುಗಳನ್ನು ತೆರೆಸಿದೆ. ನಮ್ಮ ಜೀವನದಲ್ಲಿ ಮೊದಲ ಬಾರಿಗೆ, ಜನರ ಆರೋಗ್ಯದ ರಕ್ಷಣೆಗಾಗಿ ಜಾರಿಗೊಳಿಸಿದ ಲಾಕ್‌ಡೌನ್ ಅವರ ಮೇಲೆ ಹೇಗೆ ನಕಾರಾತ್ಮಕ ಪರಿಣಾಮ ಬೀರಿದೆ ಎನ್ನುವುದನ್ನು ನಾವು ನೋಡಿದೆವು. ಮುಖ್ಯವಾಗಿ ರಸ್ತೆಬದಿ ವ್ಯಾಪಾರಿಗಳು, ದಿನಗೂಲಿ ನೌಕರರು ಮತ್ತು ಸಣ್ಣ ವ್ಯಾಪಾರಿಗಳು ಇವರಲ್ಲಿ ಸೇರಿದ್ದಾರೆ. ಪರಿಸ್ಥಿತಿಯನ್ನು ನಿರಾತಂಕಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದ್ದರೂ, ಸಾಮಾಜಿಕ ಕಾಳಜಿಯಿರುವ ಹಾಗು ಜವಾಬ್ದಾರಿಯುತ ಸದಸ್ಯರಾಗಿ, ಕೈಲಾದದ್ದನ್ನು ಮಾಡಬೇಕೆಂದು ನಾವು ನಿರ್ಧರಿಸಿದೆವು.

ನಷ್ಟಕ್ಕೊಳಗಾದ ಜನರಿಗೆ ನೆರವಾಗಲು ಬೇರೆಬೇರೆ ಮಾರ್ಗಗಳನ್ನು ಶೋಧಿಸಿದೆವು. ಕೆಲ ಹುಡುಕಾಟದ ಬಳಿಕ, ಗೂಂಜ್ ಎಂಬ ಸ್ವಯಂಸೇವಾ ಸಂಸ್ಥೆಯನ್ನು ಸಹವರ್ತಿಯಾಗಿ ಆರಿಸಿಕೊಂಡೆವು. ಗೂಂಜ್ ಒಂದು ಸ್ಥಾಪಿತ ದೇಣಿಗೆ ವಿತರಣೆ ವ್ಯವಸ್ಥೆಯನ್ನು ಹೊಂದಿದ್ದು, ನಾವು ಸಂಗ್ರಹಿಸಿದ್ದನ್ನು ಅಗತ್ಯವಿರುವವರಿಗೆ ತಲುಪಿಸುವುದಾಗಿ ಖಾತ್ರಿ ನೀಡಿತು. ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ನಾನಾ ಕಡೆಗಳಲ್ಲಿ ದೇಣಿಗೆ ಸಂಗ್ರಹ ಆಂದೋಲನವನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆವು. ಅಗತ್ಯ ವಸ್ತುಗಳಾದ ಬಟ್ಟೆಗಳು, ಚಪ್ಪಲಿಗಳು, ದಿನಸಿಗಳು, ಪುಸ್ತಕಗಳು, ಖಾದ್ಯತೈಲ, ಲೇಖನ ಸಾಮಗ್ರಿಗಳು, ಹೊದಿಕೆ ಮತ್ತು ಚೀಲಗಳನ್ನು ಸಂಗ್ರಹಿಸಲು ನಿರ್ಧರಿಸಿದೆವು.

ಇದು ಉತ್ತಮ ಆಲೋಚನೆಯೇ ಎನ್ನುವ ಸಂಶಯ ಆರಂಭದಲ್ಲಿ ನಮಗೆ ಇದ್ದಿತ್ತು: ಸಾಕಷ್ಟು ವಸ್ತುಗಳು ಸಂಗ್ರಹವಾಗುತ್ತವೆಯೇ ಎನ್ನುವ ಆತಂಕ ಕಾಡುತ್ತಿತ್ತು. ಆದರೆ, ಸಾರ್ವಜನಿಕರ ಔದಾರ್ಯವನ್ನು ನಾವು ನೆಚ್ಚಿಕೊಂಡೆವು. ಮಾಸಾಂತ್ಯದೊಳಗೆ ಇಮೇಲ್, ವಾಟ್ಸ್ಯಾಪ್ ಮೂಲಕ ದೇಣಿಗೆ ಸಂಗ್ರಹ ಅಭಿಯಾನ ಕುರಿತು ಪ್ರಚಾರಾಂದೋಲನಕ್ಕೆ ನಮ್ಮ ಗಮನವನ್ನು ಕೇಂದ್ರೀಕರಿಸಿದೆವು. ಸ್ನೇಹಿತರ ಸಂಪರ್ಕಜಾಲಗಳ ಮೂಲಕ ದೇಣಿಗೆಯನ್ನು ಕೋರಿದೆವು ಹಾಗು ವಿಷಯವನ್ನು ಜನರಿಗೆ ತಲುಪಿಸಿದೆವು. ದೇಣಿಗೆ ನೀಡುವವರಿಗೆ ಅನುಕೂಲವಾಗಲಿ ಎಂದು, ನಿಗದಿತ ಸ್ಥಳಗಳಲ್ಲಿ ಸಂಗ್ರಹ ಪೆಟ್ಟಿಗೆಗಳನ್ನು ಇರಿಸಲು ಯೋಜಿಸಿದೆವು. ದೊಡ್ಡ ರಟ್ಟಿನ ಪೆಟ್ಟಿಗೆಗಳನ್ನು ಸಂಗ್ರಹಿಸುವುದು ಕೂಡ ಸವಾಲಾಗಿತ್ತು. ದೇಣಿಗೆ ಆಂದೋಲನಕ್ಕೆ ಒಂದು ವಾರ ಮೊದಲು, ಆನ್‌ಲೈನ್ ಶಾಪಿಂಗ್‌ನಿಂದ ಬಂದ ಯಾವುದೇ ರಟ್ಟಿನ ಪೆಟ್ಟಿಗೆಗಳನ್ನು ಎಸೆಯದೆ ಸಂಗ್ರಹಿಸಿಕೊಳ್ಳಬೇಕೆಂದು ಸ್ನೇಹಿತರು ಹಾಗು ನೆರೆಹೊರೆಯವರಿಗೆ ಮನವಿ ಮಾಡಿದೆವು. ಅಕ್ಕಪಕ್ಕದ ಕಿರಾಣಿ ಅಂಗಡಿಗಳವರಲ್ಲೂ ಇದೇ ರೀತಿ ಕೇಳಿಕೊಂಡೆವು. ಅಂಗಡಿಗಳ ಮಾಲೀಕರು ಸಹಕಾರ



ಕೊಡುವುದಾಗಿ ಹೇಳದರಲ್ಲದೆ, ಕೆಲದಿನ ಬಿಟ್ಟು ಬರಲು ಸೂಚಿಸಿದರು. ಈ ರೀತಿ ಸಂಗ್ರಹಿಸಿದ ಪೆಟ್ಟಿಗೆಗಳನ್ನು ಸಮರ್ಪಕವಾಗಿ ಶುಚಿಗೊಳಿಸಿ, ಉದ್ದೇಶಿತ ಸ್ಥಳಗಳಲ್ಲಿ ಇರಿಸಿದೆವು.

ವಿಷಯ ಹರಡಿದಂತೆ, ನಿರೀಕ್ಷೆಗೂ ಮೀರಿ ಬೆಂಬಲ ದೊರೆಯಿತು. ತಾವು ಬಳಸದ ವಸ್ತುಗಳನ್ನು ನೀಡುವ ಈ ಅವಕಾಶವನ್ನು ಬಳಸಿಕೊಳ್ಳಲು ಜನ ಮುಗಿಬಿದ್ದರು. ಸಕಾರಾತ್ಮಕ ಪ್ರತಿಕ್ರಿಯೆಯಿಂದ ಉತ್ತೇಜಿತರಾಗಿ, ಇನ್ನಷ್ಟು ಸಂಗ್ರಹ ಪೆಟ್ಟಿಗೆಗಳನ್ನು ಇರಿಸಿದೆವು ಹಾಗು ಅಕ್ಟೋಬರ್ ಮಧ್ಯಭಾಗದಿಂದ ಆಗಾಗ ದೇಣಿಗೆಯನ್ನು ಸಂಗ್ರಹಿಸಲಾರಂಭಿಸಿದೆವು.

ಸಂಗ್ರಹಗೊಂಡ ವಸ್ತುಗಳನ್ನು ಬೆಂಗಳೂರಿನಲ್ಲಿರುವ ಗೂಂಜ್ ಸಂಸ್ಥೆಯ ಗೋದಾಮಿಗೆ ಸಾಗಿಸುವುದು ಮುಂದಿನ ಹಂತದ ಕೆಲಸವಾಗಿತ್ತು. ಆದರೆ, ಭಾರೀ ಪ್ರಮಾಣದಲ್ಲಿ ಸರಕು ಸಂಗ್ರಹವಾಗಿದ್ದರಿಂದ, ಇದು ಕಷ್ಟದ ಕೆಲಸವಾಗಿತ್ತು. ವಾಹನಕ್ಕೆ ಪೆಟ್ಟಿಗೆಗಳನ್ನು ಸಾಗಿಸಲು ಸ್ನೇಹಿತರು ಹಾಗು ಕುಟುಂಬದವರ ನೆರವು ಪಡೆದುಕೊಂಡೆವು ಮತ್ತು ಗೋದಾಮಿಗೆ ಹಲವು ಬಾರಿ ಟ್ರಿಪ್‌ಗಳನ್ನು ಸಹ ಮಾಡಬೇಕಾಯಿತು. ಒಂದು ವಾರದ ಕಾಲ ಭಾರೀ ತೂಕದ ರಟ್ಟಿನ ಪೆಟ್ಟಿಗೆಗಳನ್ನು ಹೊರುವುದು ಹಾಗು ಸಾಗಣೆ ಬಳಿಕ, ಸಂಗ್ರಹವಾದ ಎಲ್ಲ ಸರಕನ್ನು ಗೂಂಜ್‌ಗೆ ಸಾಗಿಸುವಲ್ಲಿ ಯಶಸ್ವಿಯಾದೆವು. ನಾವು ಸಂಗ್ರಹಿಸಿದ ಸರಕುಗಳನ್ನು ಕಂಡು ಅವರು ಖುಷಿಯಾದರು ಹಾಗು ಅಗತ್ಯವಿರುವವರಿಗೆ ತಲುಪಿಸುವುದಾಗಿ ಭರವಸೆ ನೀಡಿದರು.

ನೆರವಿನ ಅಗತ್ಯವಿರುವವರಿಗೆ ಸಹಾಯ ಮಾಡುವುದರಿಂದ, ನಾವು ನಿಮ್ಮೊಟ್ಟಿಗಿದ್ದೇವೆ ಹಾಗು ನಾವೆಲ್ಲರೂ ಒಂದೇ ಎನ್ನುವ ಭಾವನಾತ್ಮಕ ಒಳಗೊಳ್ಳುವಿಕೆ ಬೆಳೆಯುತ್ತದೆ. ಉತ್ತಮ ನಾಗರಿಕನೊಬ್ಬ ಇಂಥ ಭಾವನೆಗೆ ಬೆಲೆ ಕೊಡುತ್ತಾನೆ ಮತ್ತು ಅದನ್ನು ಒಪ್ಪಿಕೊಳ್ಳುತ್ತಾನೆ. ಸಮುದಾಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವವನು ಹಾಗು ಎಲ್ಲ ಸದಸ್ಯರ ಬಗ್ಗೆ ಗೌರವ ಭಾವನೆ ಹೊಂದಿರುವವನೇ ನಿಜವಾದ ನಾಗರಿಕ. ಸಮಾಜದಲ್ಲಿ ತೊಡಗಿಸಿಕೊಳ್ಳುವುದು ನಮ್ಮ ಜವಾಬ್ದಾರಿ ಹಾಗು ಅಧಿಕಾರವನ್ನು ಕುರುಡಾಗಿ ಒಪ್ಪಿಕೊಳ್ಳುವುದಲ್ಲ ಎಂದು ನಾವು ನಂಬುತ್ತೇವೆ. ಜನರು ತಮ್ಮ ವೈಯಕ್ತಿಕ ಕೆಲಸದ ಜೊತೆಗೆ ನೆರೆಹೊರೆಯವರ ಒಳಿತನ್ನು ಬಯಸಿದಾಗ, ಅವರು ಪೌರತ್ವದ ಸ್ಫೂರ್ತಿಯನ್ನು ಒಳಗೊಳ್ಳುತ್ತಾರೆ. ಸಭೆಗಳು ಹಾಗು ಹಬ್ಬಗಳನ್ನು ಹಮ್ಮಿಕೊಳ್ಳಲು ಸಮುದಾಯಕ್ಕೆ ನೆರವಾಗುವುದು ಸೇರಿದಂತೆ, ಸಮುದಾಯಕ್ಕೆ ನೆರವಾಗುವ ಮತ್ತು ಬಲಗೊಳಿಸುವ ಪ್ರತಿಯೊಂದು ಚಟುವಟಿಕೆಯೂ ಈ ಚೈತನ್ಯವನ್ನು ಬಲಗೊಳಿಸುತ್ತದೆ.





**ಪ್ರಣೀತ್ ಗುಡ್ಲದನ:** ಬೆಂಗಳೂರಿನ ಇಂಟರ್‌ನ್ಯಾಷನಲ್ ಸ್ಕೂಲ್‌ನ 11ನೇ ತರಗತಿ ವಿದ್ಯಾರ್ಥಿ.
ಇಮೇಲ್: gpraneet@tisb.ac.in



**ಸಂಕಲ್ಪ್ ಕೋರಿಪಲ್ಲಿ:** ಬೆಂಗಳೂರಿನ ಇಂಟರ್‌ನ್ಯಾಷನಲ್ ಸ್ಕೂಲ್‌ನ 11ನೇ ತರಗತಿ ವಿದ್ಯಾರ್ಥಿ.
ಇಮೇಲ್: ksankalp@tisb ac.in

ಅನುವಾದ: **ಮಾಧವ ಐತಾಳ** । ಪರಿಶೀಲನೆ: **ಲತಾ ಕೆ.ಸಿ.**